Formation of Colony for Banjaris in Bhadravathi Taluk.

*Q.—549. Sri T. D. DEVENDRAPPA (Bhadravathi).—

Will the Government be pleased to state :—

(*a*) whether it is a fact that Banjaris of Arlikuppa, Bhadravati Taluk, have requested Government for the formation of a colony for them ;

(*b*) the amount required for this scheme;

(*c*) the reasons for not sanctioning the same so far ?

A.—Smt. YASHODHARA DASAPPA (Minister for Social Welfare).—

(*a*) Yes.
(*b*) Rs. 43,500.
(*c*) Non-availability of adequate land for colonisation.

ಶ್ರೀ ಎಸ್. ನುಬ್ಬಯ್ಯ ನಾಯಕ್.—ಭದ್ರಾವತಿ ತಾಲ್ಲೂಕಿನಲ್ಲಿಯೇ ಸ್ಥಳ ಕೇಳಿಲ್ಲ. ಭದ್ರಾವತಿ ಯಲ್ಲ ಸ್ಥಳವಿಲ್ಲದಿದ್ದರೆ ಅವರು ಇನ್ನೆಲ್ಲಿಯಾದರೂ ಇರಬಹುದು. ಆದ್ದರಿಂದ ಅವರಿಗೆ ಭದ್ರಾವತಿ ತಾಲ್ಲೂಕಿನಲ್ಲಿ ಅಲ್ಲದೆ ಇದ್ದರೂ ಕೂಡ, ಅವರಿಗೆ ಬೇರೆ ಕಡೆ ಅಂಥ ಸ್ಥಳವನ್ನು ಕೊಟ್ಟು ಅವರಿಗೆ ಕಾಲೋನಿ ಒದಗಿಸಿಕೊಡಬಹುದಲ್ಲಾ ?

†ಶ್ರೀಮತಿ ಯಶೋಧರ ದಾಸಪ್ಪ.—ಅರಳಿಕೊಪ್ಪದಲ್ಲಿ 49 ಜನ ಬಂಜಾರಿಗಳು, 14 ಜನ ಹರಿಜನರೂ ಇದ್ದಾರೆ. ಒಂದೆರಡು ಎಕರೆ ಜಮೀನೂ ಇದೆ ಅವರಿಗೆ. ಗುಡಿನಲುಗಳನ್ನು ಕಟ್ಟಿಕೊಂಡು ಅಲ್ಲಿಯೇ ಇದ್ದಾರೆ. ಆ ಜಾಗದಲ್ಲಿ ಅಗ್ರಿಕಲ್ಚರ್ ಕಾಲೋನಿ ಮಾಡುವುದಕ್ಕೆ ಸಾಧ್ಯವಿಲ್ಲ, ಏಕೆಂದರೆ ನುತ್ತಮುತ್ತಲೂ ಜಾಗವಿಲ್ಲ. ಡಿ.ಸಿ., ಬಿ.ಡಿ.ಓ, ತಹಸೀಲ್‌ದಾರ್ ಮಾಹಿತಿ ಕೊಟ್ಟಿದ್ದಾರೆ. ಅವರು ಬೇರೆ ಕಡೆಗೆ ಹೋಗುವುದಕ್ಕೆ ಸಿದ್ಧರಾಗಿದ್ದರೆ ಕಾಲೋನೀ ಮಾಡಬಹುದೆ ವಿನಃ ಇಲ್ಲದಿದ್ದರೆ ಇಲ್ಲ. ಅವರು ಇರತಕ್ಕ ಜಾಗದಲ್ಲಿ ಒಂದೆರಡು ಎಕರೆ ಇಟ್ಟುಕೊಂಡಿದ್ದಾರೆ. ಅವರು ಕೇವಲ ಎತ್ತು, ಅಗ್ರಿ ಕಲ್ಚರಲ್ ಇಂಪ್ಲಿಮೆಂಟ್ಸ್ ಕೇಳುತ್ತಾ ಇದ್ದಾರೆ. ಜಾಗ ಇಲ್ಲದೆ ಇರುವುದರಿಂದ ಅಲ್ಲಿ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಟಿ. ಮಾದಯ್ಯಗೌಡ.—ಕಾಲೋನಿಗಳನ್ನು ಮಾಡಬೇಕಾದರೆ ಸಾಧಾರಣವಾಗಿ ಎಷ್ಟು ಎಕರೆಗಳಿದ್ದರೆ ಅದನ್ನು ಮಾಡಿಕೊಡಲು ಸಾಧ್ಯ ? ಕಾಲೋನಿಗಳಲ್ಲಿ ಇಷ್ಟು ಜನರು ಇರಬೇಕೆಂದೇ ನಾದರೂ ನರಕಾರದವರು ನಿಗದಿ ಮಾಡಿದ್ದಾರೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ಇಷ್ಟು ಫ್ಯಾಮಿಲಿಗಳಿರಬೇಕು ಮತ್ತು ಒಂದು ಮನೆಗೆ ನಾಲ್ಕು ಅಥವಾ ಆರು ಎಕರೆಗಳಷ್ಟು ಜಮೀನೂ ಇರಬೇಕು ಎಂದಿದೆ.

Sri C. J. MUCKANNAPPA.—I am raising an objection. The Chair has observed sometime back that a question or supplementary cannot be put unless it is of general interest.

Sri N. HUCHMASTHY GOWDA.—The question is already put. He cannot raise objection now.

Sri C. J. MUCKANNAPPA.—The Chair has specifically and precisely given a comprehensive ruling that unless it is of general importance, the Chair is not inclined to put the question. I am not questioning the ruling of the Hon'ble Chair. He has given some momentum and rejuvenation now.

Mr. DEPUTY SPEAKER.—Some Hon'ble members desire that it should be put.

†Indicates that the remarks or speeches have not been revised by the member concerned.

Sri C. J. MUCKANNAPPA.—The same concession must be shown to members of this Section also.

Mr. DEPUTY SPEAKER.—There cannot be any rule like that.

Sri G. V. GOWDA.—The established convention is when a member is absent and if his question is importance or general interest, then only the Chair would make up its mind to put the question. That convention still stands. But here this particular case pertains to a Community, so.....

Mr. DEPUTY SPEAKER.—The Hon'ble Member cannot ignore this.

ಶ್ರೀ ಡಿ. ಎಂ. ಸಿದ್ದಯ್ಯ.—43,500 ರೂಪಾಯಿಗಳಷ್ಟು ಖರ್ಚು ಮಾಡಬೇಕು ಎಂದು ಇದರಲ್ಲಿದೆ. ಇದರಲ್ಲಿ ಎಷ್ಟು ಫ್ಯಾಮಿಲಿಗಳವರು ಇದ್ದಾರೆ ?

ಶ್ರೀಮತಿ ಯಶೋಧರ ದಾಸಪ್ಪ.—41 ಜನ ಬಂಜಾರಾ ಫ್ಯಾಮಿಲಿಗಳು ಹಾಗೂ 14 ಜನ ಹರಿಜನರು.

ಶ್ರೀ ಡಿ. ಎಂ. ಸಿದ್ದಯ್ಯ.—ಕಾಲೋನಿಗಳನ್ನು ಮಾಡಬೇಕಾದರೆ ಸರಿಯಾದ ಸ್ಥಳವಿಲ್ಲ ಎಂದು ಉತ್ತರ ಕೊಟ್ಟಿರಿ. ತಮ್ಮ ಅಧಿಕಾರಿಗಳು ಇಲ್ಲಗೆ ಹೋಗಿ ನೋಡಿ ಸ್ಥಳವಿದೆಯೇ ಇಲ್ಲವೇ ಎನ್ನುವುದನ್ನು ತಿಳಿದು ವರದಿ ಮಾಡಿದ್ದಾರೆಯೇ ಇಲ್ಲವೇ ಈ ಯೋಜನೆ ಮಾಡುವಾಗಲೇ ಇದಕ್ಕೆ ಸ್ಥಳವಿರ ತಕ್ಕದ್ದು ಎಂದು ಯೋಚನೆ ಮಾಡಿರಲಿಲ್ಲವೇ.

ಶ್ರೀಮತಿ ಯಶೋಧರಾ ದಾಸಪ್ಪ.—ಯೋಚನೆ ಮಾಡುವುದಲ್ಲ. ಇವರು ಹರಳಗುಪ್ಪೆ ಎನ್ನುವ ಹಳ್ಳಿಯಲ್ಲಿ ಇದ್ದಾರೆ. ಭಧ್ರಾವತಿಯಲ್ಲಿ ಎಲ್ಲೆಲ್ಲಿಯೂ ಜಮೀನು ಇದೆ. ಇವರಿರತಕ್ಕ ಹಳ್ಳಿಯಲ್ಲಿ 55 ಸಂಸಾರಗಳಿವೆ. ಇವರಲ್ಲಿ ಪ್ರತಿಯೊಬ್ಬರಿಗೂ ಒಂದು ಎಕರೆ, ಎರಡು ಎಕರೆಗಳಷ್ಟು ಭೂಮಿ ಇದೆ. ಸರಕಾರಕ್ಕೆ ಇಲ್ಲರುವ ಬಿ. ಡಿ. ಓ. ಗಳು ತಹಶೀಲುದಾರರು ಡೆಪ್ಯುಟೀ ಕಮಿಷನರವರು ನೋಡಿಯೇ ಸ್ಥಳವಿಲ್ಲ ಎಂದು ವರದಿ ಕಳುಹಿಸಿದ್ದಾರೆ.

ಶ್ರೀ ಎನ್. ನುಬ್ಬಯ್ಯನಾಯಕ್.—ಇಲ್ಲರುವ 14 ಕುಟುಂಬಗಳವರಿಗೆ ಒಂದೊಂದು ಕುಟುಂಬದವರಿಗೂ ಎರಡು ಎಕರೆಗಳಷ್ಟು ಕೊಡಲು ಜಮೀನುಗಳಿರುವುದಿಲ್ಲ ಎಂದು ಹೇಳಿದಿರಿ. ಇಂತಹ ಕುಟುಂಬಗಳಿಗೋಸ್ಕರ ವ್ಯವಸಾಯಕ್ಕೆ ಪ್ರಯೋಜನವಾಗುವಂತಹ ಇತರ ಎಲ್ಲ ಸವಲತ್ತುಗಳನ್ನೂ ಕೊಡುವಂತೇಕೆ ಮಾಡಬಾರದು ?

ಶ್ರೀಮತಿ ಯಶೋಧರಾ ದಾಸಪ್ಪ.—ಇವರ ಬಗ್ಗೆ ಡೆಪ್ಯೂಟೀ ಕಮಿಷನರವರು ಶಿಫಾರಸು ಮಾಡಿದ್ದಾರೆ. ಎತ್ತು ಹಾಗೂ ವ್ಯವಸಾಯಕ್ಕಾಗಿ ಏನೇನು ಇಂಪ್ಲಿಮೆಂಟುಗಳು ಬೇಕೋ ಅದನ್ನು ಕೊಡಬೇಕೆಂದು ಹೇಳಿದ್ದಾರೆ. ಅದನ್ನು ಮುಂದಿನ ವರ್ಷ ಕೊಡಲಾಗುತ್ತದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಇವರಿಗೇ ಬೇಕಾಗುವ ಸ್ಥಳವನ್ನು ಎಷ್ಟು ಬೇಕೋ ಅಷ್ಟನ್ನು ಈ ಸ್ಕೀಮುಗಳನ್ನು ಹಾಕುವುದಕ್ಕೋಸ್ಕರ ಕೊಡಿಸಿಕೊಟ್ಟರೆ ಈ ವರ್ಷದಲ್ಲೇ ಅಲ್ಲಿ ಕೆಲಸಗಳನ್ನು ಶುರು ಮಾಡುತ್ತೀರಾ ?

ಶ್ರೀಮತಿ ಯಶೋಧರಾ ದಾಸಪ್ಪ.—ಅವರಿಗೆ ಸ್ಥಳ ಒದಗಿಸಿ ಕೊಟ್ಟು 55 ಫ್ಯಾಮಿಲಿಗಳವರೂ ನೀವು ಕೊಟ್ಟ ಜಾಗಕ್ಕೆ ಹೋಗಲು ಸಿದ್ಧವಾಗಿದ್ದರೆ ಬರುವ ವರ್ಷವೇ ಕಾಲೊನಿಯನ್ನು ಮಾಡಿ ಕೊಡುತ್ತೇವೆ.

ಶ್ರೀ ಗೋಪಾಲನಾಲೆನ್ನ.—ಸಾಧಾರಣವಾಗಿ ಕಾಲೊನಿಗಳನ್ನು ಮಾಡುವಾಗ ಅದಕ್ಕೆ ಸಂಬಂಧಪಟ್ಟ ಡೆಪ್ಯೂಟೀಕಮಿಷನರವರು ಸ್ಥಳ ತೋರಿಸಿದರೆ ಅದು ಕೃಷಿಗೆ ಯೋಗ್ಯವಾದ ಸ್ಥಳವಾಗಿರುವುದಿಲ್ಲ ಮತ್ತು ಸಿಗುವುದೂ ಕಷ್ಟ. ಇನ್ನು ಮುಂದೆ ಡೆಪ್ಯೂಟಿ ಕಮಿಷನರವರು ಕೃಷಿಗೆ ಯೋಗ್ಯವಾದ ಸ್ಥಳವನ್ನು ಕೊಡಲು ಮಿನಿಮಂ ರಿಕ್ವೈರುಮೆಂಟು ಎಂದು ಕೊಡಲು ಕೆಲವು ಜಮೀನುಗಳನ್ನು ಸರಕಾರವೇ ಅಕ್ವೈರು ಮಾಡಿಕೊಂಡು ಏಕೆ ಕೊಡುವಂತೆ ಮಾಡಬಾರದು !

ಶ್ರೀಮತಿ ಯಶೋಧರಾ ದಾಸಪ್ಪ.—ಬೇರೆ ಜನಗಳು ಜಮೀನು ಮಾಡುತ್ತಿರುವುದನ್ನು ಸರಕಾರ ಅಕ್ವೈರು ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಕೇವಲ ಮನೆಗಳನ್ನು ಕಟ್ಟಿಕೊಳ್ಳಲು ಜಾಗ ಕೊಡಲು ಅಕ್ವಿಸಿಷನ್ನು ಪ್ರೊಸೀಡಿಂಗ್ಸ್ ನಡೆಯುತ್ತಿರುತ್ತದೆ. ಸರಕಾರವೇ ನೇರವಾಗಿ ಅಕ್ವಿಸಿಷನ್ನು ಮಾಡಿಕೊಂಡು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.